ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ನಡೆದಿರತಕ್ಕಂತಹ ಘಟನೆ ಕುರಿತು

* ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ನಡೆದಿರತಕ್ಕ ಘಟನೆಗಳ ವಿಚಾರದಲ್ಲಿ ಪ್ರಸ್ತಾಪ ಮಾಡತಕ್ಕಂತ ಸದಾವಕಾಶವನ್ನು ತಾವು ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ನಾನು ಒಂದು ಮಾತನ್ನು ಈ ಸದನದ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ನಮ್ಮ ಉದ್ದೇಶ, ನಮ್ಮ ಸಮಾಜದಲ್ಲಿರತಕ್ಕಂಥ ಒಂದು ವಾಸ್ತವಾಂಶವನ್ನು ಗಮನದಲ್ಲಿಟ್ಟು ನಾವು ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭ ಇದು ನಮ್ಮ ಚಿಂತನೆ, ನಮ್ಮ ವಿಷಯದ ಪ್ರಸ್ತಾಪ ಅದು ರಾಜ್ಯದ ಮತ್ತು ರಾಷ್ಟ್ರದ ಒಳಿತಿಗಾಗಿ ಆವತ್ತು ನಡೆದಿರತಕ್ಕಂಥ ಆ ಘಟನೆ ಮಾನ್ಯ ಸಭಾಧ್ಯಕ್ಷರೆ,....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದು ನಿಲುವಳಿ ಸೂಚನೆ ಎನ್ನುವ ಹಾಗೆ ಕಾಣುತ್ತದೆ. ಇದು ಪ್ರಶ್ನೋತ್ತರ ಕಾಲ ಆದ ತಕ್ಷಣ ಬರಬೇಕಾಗಿತ್ತು. ಆದ್ದರಿಂದ ಯಾವುದಾದರೂ ವಿಧೇಯಕಗಳನ್ನು ತಾವು ತೆಗೆದುಕೊಳ್ಳಬಹುದು. ನಿಲುವಳಿ ಸೂಚನೆಗೆ ಕಾಲ ಮೀರಿಹೋಗಿದೆ,

ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇದು ಅತ್ಯಂತ ಪ್ರಾಮುಖ್ಯವಾದಂಥ ಪ್ರಶ್ನೆ, ಯಾವಾಗಲಾದರು ಒಂದು ಸಾರಿ ಇದು ಚರ್ಚೆಯಾಗಲೇ ಬೇಕಾಗಿತ್ತು. ಆದರೆ ನಿಯಮಗಳ ಕಟ್ಟುಪಾಡಿಗೆ ಕಟ್ಟುಬೀಳದೆ ತಾವು 68ರ ಪರಿವರ್ತನೆ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರೂ ಕೂಡ ಯಾವ ನಿಯಮಾವಳಿ ಪ್ರಕಾರ ಚರ್ಚೆಗೆ ಇದನ್ನು ಅವಕಾಶಮಾಡಿ ಕೊಡಬೇಕು ಎನ್ನುವ ಅಂತಿಮ ತೀರ್ಮಾನವನ್ನು ನಾನು ತಮಗೆ ಬಿಡುತ್ತೇನೆ.

ಅಧ್ಯಕ್ಷರು : ಬಂಗಾರಪ್ಪನವರೆ ನಾನು ಇದನ್ನು ನಿಯಮ 68ರ ಕೆಳಗೆ 7ನೇ ತಾರೀಖು ತೆಗೆದುಕೊಳ್ಳುತ್ತೇನೆ.

ಶ್ರೀ.ಎಸ್. ಬಂಗಾರಪ್ಪ : ಆಗಬಹುದು ಮಾನ್ಯ ಸಭಾಧ್ಯಕ್ಷರೆ, ಈ ವಿಷಯದ ಚರ್ಚೆಗಾಗಿ ಅನುಮತಿ ಕೊಟ್ಟಿದ್ದಕ್ಕಾಗಿ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ. ನಾನಾಗಲೀ, ಈ ಸದನದ ಸದಸ್ಯರುಗಳಿಂದ ಯಾವುದೇ ಅಭಿಪ್ರಾಯವಾಗಲೀ, ನಮ್ಮ ದೇಶದಲ್ಲಿ ಇರತಕ್ಕ ಸಮಾಜದ ವ್ಯವಸ್ಥೆ. , ಈ ವ್ಯವಸ್ಥೆಯಲ್ಲಿ ಇರತಕ್ಕಂಥ ಕೆಲವು ಪ್ರಾಮುಖ್ಯವಾಗಿರತಕ್ಕ ವಿಷಯಗಳ ಪ್ರಸ್ತಾಪ ಸಮಾಜಕ್ಕೆ ಅಂಟಿಕೊಂಡಂತೆ ಏನಿದೆ ಅವುಗಳನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರದ ಮುಖಾಂತರ ರಾಜ್ಯದ ಹಿತವನ್ನು ನಾವು ಗಮನದಲ್ಲಿಟ್ಟುಕೊಂಡೇ ಮಾತನಾಡಬೇಕಾಗುತ್ತದೆ. ಇದು ಸಣ್ಣ ವಿಷಯ ಅಲ್ಲ, ಶಿವಮೊಗ್ಗ

ಭದ್ರಾವತಿಯಲ್ಲಿ ನಡೆದಿರತಕ್ಕ ಘಟನೆಗಳು ಅದು ಈಗಾಗಲೇ ಕರ್ನಾಟಕ ರಾಜ್ಯದ ಜನಮನವನ್ನು ಅಥವಾ ಜನರ ಗಮನವನ್ನು ಸೆಳೆಯತಕ್ಕ ವಿಚಾರ ಒಂದು ಕಡೆಗಾದರೆ, ಮತ್ತೊಂದು ಕಡೆಗೆ,..

ಅಧ್ಯಕ್ಷರು : ನಾನು ಈ ವಿಷಯವನ್ನೇ 7 ನೇ ತಾರೀಖು 68ನೇ ನಿಯಮದ ಕೆಳಗೆ ತೆಗೆದುಕೊಳ್ಳುತ್ತೇನೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಎಸ್ ಬಂಗಾರಪ್ಪ : ನಾನು ಈಗಾಗಲೇ ಪ್ರಸ್ತಾಪವನ್ನು ಪ್ರಾರಂಭ ಮಾಡುತ್ತೇನೆ ಅದಕ್ಕಾಗಿ ಅನುಮತಿಯನ್ನು ತಾವು ಕೊಟ್ಟಿದ್ದೀರಿ. ಇದರ ಬಗ್ಗೆ ಬಹಳ ಕಾಲವನ್ನು ನಾವು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ನಾನು ಎಷ್ಟು ಚರ್ಚೆಯನ್ನು ಮಾಡುತ್ತೇವೆ ಅದರಿಂದ ನಮಗೆ ಅಷ್ಟು ಉಪಯೋಗ ಕಾಣುತ್ತಿಲ್ಲ. ಇದನ್ನು ಮಾನ್ಯ ಸಭಾ ನಾಯಕರೂ ಕೂಡ ಒಪ್ಪುತ್ತಾರೆಂದು ನನ್ನ ಭಾವನೆ . ಚರ್ಚೆಯನ್ನು ಹೆಚ್ಚು ಉದ್ದವಾಗಿ ಬೆಳೆಸಿದರೂ ಕೂಡ ಅದರಿಂದ ಅಷ್ಟು ಒಳ್ಳೆಯದಾಗಲಾರದೆಂದು ನನ್ನ ಭಾವನೆ. ನಾವು ಕಡಿಮೆ ಕಾಲದಲ್ಲಿ ಚರ್ಚೆಮಾಡಿ, ಇಂಥ ಘಟನೆ ಮುಂದೆ ಆಗದಂತೆ ನೋಡಿಕೊಳ್ಳುವಂಥಾದ್ದು ಒಂದು ಆದರೆ, ಈಗ ನಡೆದಿರತಕ್ಕ ಘಟನೆಯ ಬಗ್ಗೆ ಈ ಸರ್ಕಾರ ಮತ್ತು ಸಮಾಜ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬ ವಿಚಾರಗಳನ್ನು ಬಿಟ್ಟರೆ ಬೇರೆ ವಿಚಾರಗಳನ್ನು ಇಲ್ಲಿ ಮಾತನಾಡತಕ್ಕ ಅವಶ್ಯಕತೆ ಇಲ್ಲ. ನಾಳೆ ಪ್ರಸಾರ ಮಾಧ್ಯಮಗಳಲ್ಲಿ ವಿಚಾರಗಳು ಹೆಚ್ಚು ಬಂದಷ್ಟೂ ಕೂಡ ಕೆಲವೊಮ್ಮೆ ಒಳ್ಳೆಯದಾಗಲಾರದೆಂಬ ಅನಿಸಿಕೆಯೂ ಕೂಡ ನನ್ನ ಮನಸ್ಸಿನಲ್ಲಿದೆ. ಆದರೆ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ವಾಸ್ತವಾಂಶವನ್ನು ಬದಿಗೊತ್ತಿ ನಾವು ಮುಂದಕ್ಕೆ ಹೊಗುತ್ತೇವೋ ಏನೋ ಎಂಬ ಅನುಮಾನ ಇದೆ. ಈ ಕಾರಣದಿಂದಾಗಿ ಈ ವಿಷಯ ಈ ಸದನದಲ್ಲಿ ಪ್ರಸ್ತಾಪ ಆಗ ಬೇಕಾಗಿತ್ತು. ಆದರೆ ಕಾಲಾಭಾವದಿಂದ ಇದನ್ನು ಇನ್ನೊಂದು ಸಾರಿ ತೆಗೆದುಕೊಳ್ಳೋಣವೆಂದು ತಾವು ಕೂಡ ಹೇಳಿದಿರಿ. ಈ ವಿಷಯವನ್ನು ನಿಯಮ 68ರ ಕೆಳಗೆ ವಿಷಯದ ಪ್ರಾಮುಖ್ಯತೆಯನ್ನು ಅನುಸರಿಸಿ ಮಾನ್ಯ ಸಭಾನಾಯಕರು ಒಪ್ಪಿಗೆಯನ್ನು ಕೊಡುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಮಾನ್ಯ ಸಭಾಧ್ಯಕ್ಷರೂ ಕೂಡ ಇದಕ್ಕೆ ತಮ್ಮ ಅನುಮತಿಯನ್ನು ಕೊಟ್ಟಿದ್ದೀರಿ. ಈಗ ಸರ್ಕಾರದ ವತಿಯಿಂದ ಯಾವುದೇ ಅಭ್ಯಂತರ ಬರಲಾರದೆಂದು ನಾನು ಭಾವಿಸಿದ್ದೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ವಿಚಾರ ಬಹಳ ಪ್ರಾಮುಖ್ಯವಾದ ವಿಚಾರ. ಇದು ಈ ಸದನದಲ್ಲಿ ಚೆರ್ಚ ಆಗಲೇಬೇಕು. ಇದನ್ನು ತಾವು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದು ತಮಗೆ ಬಿಟ್ಟಿದ್ದುದು. ಏಕೆಂದರೆ ಮಾನ್ಯ ಈಶ್ವರಪ್ಪನವರೂ ಚರ್ಚೆಮಾಡಬೇಕಾಗುತ್ತದೆ, ಅದೇ ರೀತಿ ತಾವು ಕೂಡ ಚರ್ಚೆ ಮಾಡಬೇಕಾಗುತ್ತದೆ. ಇದಕ್ಕೆ ಸಮಯವನ್ನು ನಿಗದಿ ಮಾಡುವುದು ತಮಗೆ ಬಿಟ್ಟಿದ್ದು . ಇದು ಚರ್ಚೆ ಆಗಲೇಬೇಕು, ಸರ್ಕಾರದಿಂದ ಇದಕ್ಕೆ

ಉತ್ತರವನ್ನು ಕೊಡಬೇಕಾಗುತ್ತದೆ. ಚರ್ಚೆಯ ಬಗ್ಗೆ ನಮ್ಮ ಅಭ್ಯಂತರವಿಲ್ಲ, ಅಲ್ಲದೆ ಚರ್ಚೆ ಆಗಲೇಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಆದರೆ ಸಮಯವನ್ನು ಯಾವಾಗ ನಿಗದಿ ಮಾಡುತ್ತೀರೆಂಬುದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : 68ನೇ ನಿಯಮದ ಪ್ರಕಾರ 7ನೇ ತಾರಿಖು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್ ಬಂಗಾರಪ್ಪ : ಇದನ್ನು ಕೊನೆಯ ದಿವಸ ತೆಗೆದುಕೊಳ್ಳುವುದಕ್ಕಿಂತ ಮೊದಲೇ ತೆಗೆದುಕೊಳ್ಳುವುದು ಸೂಕ್ತವೆಂದು ನನ್ನ ಭಾವನೆ. ಏಕೆಂದರೆ ಅವತ್ತು ಬೇರೆ ಬೇರೆ ವಿಚಾರಗಳು ಎದ್ದಾಗ ಇದು ಬಿದ್ದುಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅವತ್ತಿನ ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯವನ್ನು ಮೊದಲನೆಯದಾಗಿ ಸೇರಿಸಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಅಧ್ಯಕ್ಷರು : ಆಗಬಹುದು ಹಾಗೆಯೇ ಮಾಡುತ್ತೇನೆ.

<u>ಗಮನ ಸೆಳೆಯುವ ಸೂಚನೆಗಳು</u>

ವಿಷಯ : (1) ಬೀದರ್ ಜಿಲ್ಲೆಯ ಕಾರಂಜಿ ಯೋಜನೆಯಲ್ಲಿ 8 ಕೋಟಿ ರೂಪಾಯಿಗಳ ಅವ್ಯವಹಾರ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾಗ್) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಗೆ ನೀರಾವರಿ ಸೌಲಭ್ಯವನ್ನೊದಗಿಸುವ ದೃಷ್ಟಿಯಿಂದ ಅನುಷ್ಠಾನಗೊಳಿಸುತ್ತಿರುವ ಕಾರಂಜಿ ಯೋಜನೆಯ ಅನುಷ್ಠಾನ ಕಳಪೆ ಮಟ್ಟದ್ದಾಗಿದ್ದು ತಿರಸ್ಕರಿಸಲಾಗಿದು ಮಣ್ಣನ್ನೇ ಮತ್ತೆ ಕಾಮಗಾರಿಗೆ ಬಳಸಿ ಇದರಲ್ಲಿ ಸುಮಾರು 8 ಕೋಟಿ ರೂ.ಗಳ ಅವ್ಯವಹಾರ ನಡೆದಿರುವುದು ಕಂಡುಬಂದಿದೆ. ಇಂಥ ಅವ್ಯವಹಾರಗಳಿಂದ ಕಾರಂಜಿ ಯೋಜನೆಯ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದುಇದರ ಬಗ್ಗೆ ಕೂಡಲೇ ಸೂಕ್ತ ವಿಚಾರಣೆ ನಡೆಸುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಎಂ ಕೃಷ್ಣ : (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಕಾರಂಜಿ ಯೋಜನೆಯನ್ನು ರೂ. 250 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇಲ್ಲಿಯವರೆಗೆ 6325 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ರೂ. 111.00 ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. ಈಗಾಗಲೇ ಮಾಡಿರುವ ಮಣ್ಣಿನ ಕಾಮಗಾರಿಗಳೆಂದರೆ ಅಣೆಕಟ್ಟಿನ ಒಡ್ಡಿನ ಭಾಗ, ರಂಜೋಳ ಸೇತುವೆಯ ಅಪ್ರೋಚ್‌ಗಳು, ಬಲದಂಡೆ ಕಾಲುವೆಯ 33ನೇ ಕಿ.ಮಿ.ನಲ್ಲಿ ಕಟ್ಟಲಾದ ಅಕ್ವೆಡೆಕ್ಟ್ ಅಪ್ರೋಚ್‌ಗಳು, ಬಲದಂಡೆ ಕಾಲುವೆ ಕಿ.ಮಿ. 65ರಲ್ಲಿನ ಒಟ್ಟು ಸದರಿ ಕಾಮಗಾರಿಗಳಿಗೆ ಬಳಸಲಾದ ಮಣ್ಣನ್ನು ಗುಣ ನಿಯಂತ್ರಣ ಪರೀಕ್ಷೆಗೆ ಒಳಪಡಿಸಿದ ನಂತರವೇ